**50101/70101**

009

**ಮೊದಲನೆಯ ಚತುರ್ಮಾಸ ಬಿ.ಎಸ್ಸಿ. / ಬಿ.ಸಿ.ಎ ಪರೀಕ್ಷೆಗಳು – ಮಾರ್ಚ್/ಏಪ್ರಿಲ್ – 2022**

**ಸ್ಕೀಮ್: ಸಿಬಿಸಿಎಸ್**

**ಕನ್ನಡ ಭಾಷೆ**

**ವಿಜ್ಞಾನ ಸೌರಭ–೧**

**ಸಮಯ: 3 ಗಂಟೆ** **ಗರಿಷ್ಠ ಅಂಕ: 80**

**ಕಾವ್ಯಭಾಗ (50 ಅಂಕಗಳು)**

**1. ಅ. ಒಂದು ಪದ್ಯ ಭಾಗದ ಭಾವವನ್ನು ಸಂದರ್ಭಸಹಿತ ವಿವರಿಸಿ.** **1x5=5**

೧. ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು

೨. ಅಂದು
ನೂರಾರು ಇರುಳುಗಳಲಿ ನಾನಿಟ್ಟ
ಕಣ್ಣೀರು ಹಾಡಾಗಿ ಬಂದಿತ್ತು
ಬರಿದಾದ ಎದೆಯೊಳಗೆ ಹಸುರಾಯ್ತು
ಆಗ ಬಳಿಯಲ್ಲಿ ನೀನಿರುವ ನೆನಪೂ
ನನಗಾಗಲಿಲ್ಲ

**ಆ. ಒಂದು ವಾಕ್ಯದಲ್ಲಿ ಉತ್ತರಿಸಿ.** **5x1=5**

೧. ಯಾರ ಸಿಂಹಾಸನಕೆ ಕೊನೆಗಾಲ ಬಂದಿದೆ?

೨. 'ಕನ್ನಡ್ ಪದಗೊಳು' ಕವಿತೆಯ ಕರ್ತೃ ಯಾರು?

೩. ದ. ರಾ. ಬೇಂದ್ರೆ ಅವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ?

೪. ಮಾರನ ಮೋಹದ ಬೇಟೆಗೆ ಬಲಿಯಾದವಳು ಯಾರು?

೫. ತೊರೆಯನನ್ನು ಬಿಡದೆ ಕೂಗಿದವರು ಯಾರು?

**2. ನಾಲ್ಕು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ** **4x2½=10**

೧. "ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು"!

೨. ಕೈ ಹಿಡಿದ ಸರಪಳಿಯನ್ನು ಜಗ್ಗುತಿದೆ ಕರಿನಾಯಿ.

೩. ಒಲುಮೆಗಡ್ಡಲೆ ಕುಲದ ಹೆಮ್ಮೆ?

೪. ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು.

೫. ಹೊಕ್ಕಳ ಹೂವಿಗೂ ಹಾಲೂಡದಂತೆ ಮಾಡಿಬಿಟ್ಟ,

೬. ಆತ್ಮಸಾಕ್ಷಿಯ ಕತ್ತು ಹಿಚುಕ ಬಂದವನನ್ನ, ಮಗುವೆನ್ನಬಹುದೆ ಇವನನ್ನ?

ಪು.ತಿ.ನೋ.

3. ಅ ಎರಡು ವಿಷಯಗಳಿಗೆ ಸ್ವಂತ ಅಭಿಪ್ರಾಯವನ್ನು ಬರೆಯಿರಿ. 2x4=8

೧. ಪ್ರೀತಿ ಕರುಣೆಗಿಂತ ದೊಡ್ಡದು – ಸ್ವಂತ ಮಾತುಗಳಲ್ಲಿ ಬರೆಯಿರಿ.

೨. ಅಧಿಕಾರದ ಸದುಪಯೋಗ ಕುರಿತು ನಿಮ್ಮ ಅಭಿಪ್ರಾಯ ತಿಳಿಸಿ.

೩. ಜನಾಂಗೀಯ ಶೋಷಣೆ ಕುರಿತು ನಿಮ್ಮ ಅನಿಸಿಕೆ ತಿಳಿಸಿ.

೪. ಸ್ತ್ರೀವಾದ ಕುರಿತು ನಿಮ್ಮ ನಿಲುವೇನು? ವ್ಯಕ್ತಪಡಿಸಿ.

ಆ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. 4x½=2

ನಭ, ಇರುಳು, ಮಾರ, ಪುಳಕ, ಅಡಿ, ದ್ರವ್ಯ, ಶಯ್ಯೆ, ನೆತ್ತರು

4. ಒಂದುಪ್ರಶ್ನೆಗೆ ಉತ್ತರಿಸಿ: 1x10=10

೧. ಪು. ತಿ. ನ ಅವರ 'ನನ್ನ ನಾಯಿ' ಕವಿತೆಯಲ್ಲಿ ವ್ಯಕ್ತಗೊಂಡಿರುವ ನೈಜ ಪ್ರೀತಿಯ ಸ್ವರೂಪವನ್ನು ವಿಶದಪಡಿಸಿ.

೨. ರತ್ನನ ಕನ್ನಡಾಭಿಮಾನ 'ಕನ್ನಡ್ ಪದಗೊಳು' ಕವಿತೆಯಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿ.

5. ಎರಡು ಪ್ರಶ್ನೆಗಳಿಗೆ ಉತ್ತರಿಸಿ: 2x5=10

೧. ಕಾರಿಹೆಗ್ಗಡೆಯ ಮಗಳ ಬದುಕು ದುರಂತ ಅಂತ್ಯ ಕಂಡ ಬಗೆಯನ್ನು ವಿವರಿಸಿ.

೨. ಅಮೃತಮತಿಯ ಅಂತರಂಗದ ತೊಳಲಾಟವನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ? ವ್ಯಕ್ತಪಡಿಸಿ.

೩. 'ನಾನು ಬಡವಿ' ಕವಿತೆಯಲ್ಲಿ ಮೂಡಿಬಂದಿರುವ ಒಲವಿನ ಹಿರಿಮೆಯನ್ನು ಕುರಿತು ಬರೆಯಿರಿ.

೪. ಬಾಳ ಪಯಣದ ಚಿತ್ರಣ 'ಸಂಜೆ ದಾರಿ' ಕವನದಲ್ಲಿ ಅಭಿವ್ಯಕ್ತಿಗೊಂಡಿರುವ ಬಗೆಯನ್ನು ಚರ್ಚಿಸಿ.

## ಕಥನ ಭಾಗ (30 ಅಂಕಗಳು)

MFGC LIBRARY

6. ಒಂದು ಪ್ರಶ್ನೆಗೆ ಉತ್ತರಿಸಿ: 1x10=10

೧. ಧರ್ಮದ ಹೆಸರಿನಲ್ಲಿ ನಡೆಯುವ ಹೆಣ್ಣಿನ ಶೋಷಣೆ 'ಚಪ್ಪಲಿಗಳು' ಕತೆಯಲ್ಲಿ ಹೇಗೆ ವ್ಯಕ್ತಗೊಂಡಿದೆ? ವಿವರಿಸಿ.

೨. ಗಿರಿಜವ್ವಳ ಸ್ವಾತಂತ್ರ್ಯ ಪ್ರೇಮ – ದುಗ್ಗನ ಮಾತೃವಾತ್ಸಲ್ಯ 'ಗಿರಿಜವ್ವನ ರೊಟ್ಟಿ' ಕತೆಯಲ್ಲಿ ಚಿತ್ರಣಗೊಂಡ ಬಗೆಯನ್ನು ವಿವರಿಸಿ.

7. ಒಂದು ಪ್ರಶ್ನೆಗೆ ಉತ್ತರಿಸಿ: 1x10=10

೧. ಸಮಾಜದಲ್ಲಿ ನೆಲೆ ಕಳೆದುಕೊಂಡವರ ಬದುಕಿನ ಚಿತ್ರಣ 'ಮಾರಿಕೊಂಡವರು' ಕತೆಯಲ್ಲಿ ನಿರೂಪಿತಗೊಂಡ ಬಗೆಯನ್ನು ವಿಶ್ಲೇಷಿಸಿ.

೨. ದತ್ತ, ಕಾಶ್ಯಪ, ಮತ್ತು ಮಾಲಿನಿ – ಇವರ ಪಾತ್ರಗಳನ್ನು ಪರಿಚಯಿಸಿ.

8. ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: 2x5=10

೧. ಮಾನವೀಯ ಸಂಬಂಧಗಳ ಪ್ರಾಮುಖ್ಯತೆ 'ಗೌತಮಿ ಹೇಳಿದ ಕತೆ'ಯಲ್ಲಿ ಮೂಡಿಬಂದಿರುವ ಬಗೆಯನ್ನು ತಿಳಿಸಿ.

೨. ಭಾರದ್ವಾಜನ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಪರಿಚಯಿಸಿ.

೩. ಲಕ್ಷ್ಮಿಯ ಬದುಕಿನ ದುರಂತಕ್ಕೆ ಬೀರನ ದೌರ್ಬಲ್ಯವೇ ಕಾರಣ? ತಿಳಿಸಿ.

೪. ಗುರುಬಸಪ್ಪನ ಮನಃ ಪರಿವರ್ತನೆಯ ಸಂದರ್ಭ 'ಗಿರಿಜವ್ವನ ರೊಟ್ಟಿ' ಕತೆಯಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿ.

** *** **